# ಸೋಲಾರ್ ವ್ಯವಸ್ಥೆ ಅಳವಡಿಕೆ

**ಬೆಳ್ತಂಗಡಿ, ಮಾ. 19 :** ರೋಟರಿ ಕ್ಲಬ್ ಬೆಳ್ತಂಗಡಿ ಇದರ ವತಿಯಿಂದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ಸಿಂಡಿಕೇಟ್ ಬ್ಯಾಂಕಿನ ಹಣಕಾಸಿನ ನೆರವಿನೊಂದಿಗೆ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿರುವ 150 ಕುಟುಂಬಗಳಿಗೆ ಸೋಲಾರ್ ಲೈಟಿನ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿರುವುದಾಗಿ ರೋಟರಿ ಅಧ್ಯಕ್ಷ ಪ್ರತಾಪ ಸಿಂಹ ನಾಯಕ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರೋಟರಿ ಸಂಸ್ಥೆ ಪ್ರತಿ ಕುಟುಂಬಕ್ಕೆ ರೂ 2000 ದಂತೆ ಸಹಾಯ ಧನ ನೀಡಲಿದ್ದು, ಉಳಿದ ಹಣವನ್ನು ಬ್ಯಾಂಕ್‌ಗಳು ಸಾಲವಾಗಿ ನೀಡಲಿದೆ. ನಮ್ಮ ಸಂಸ್ಥೆಯವರು ಸಹಾಯಧನದೊಂದಿಗೆ ಸೋಲಾರ್ ಅಳವಡಿಸಲಿದ್ದಾರೆ. ಯೋಜನೆಗಾಗಿ ನಿಡ್ಲೆ, ಕಳೆಂಜ ಮತ್ತು ಶಿಶಿಲ ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಸೋಲಾರ್ ವಿತರಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೆಲ್ಕೋ ಸಂಸ್ಥೆಯ ಅಧಿಕಾರಿಗಳು, ರೋಟರಿ ಕ್ಲಬ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂಯುಕ್ತ
ಕರ್ನಾಟಕ
ಮಂಗಳೂರು । 20-3-2011



# ಸೋಲಾರ್ ವ್ಯವಸ್ಥೆ ಅಳವಡಿಕೆ

**ಬೆಳ್ತಂಗಡಿ, ಮಾ. 19 :** ರೋಟರಿ ಕ್ಲಬ್ ಬೆಳ್ತಂಗಡಿ ಇದರ ವತಿಯಿಂದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ಸಿಂಡಿಕೇಟ್ ಬ್ಯಾಂಕಿನ ಹಣಕಾಸಿನ ನೆರವಿನೊಂದಿಗೆ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿರುವ 150 ಕುಟುಂಬಗಳಿಗೆ ಸೋಲಾರ್ ಲೈಟಿನ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿರುವುದಾಗಿ ರೋಟರಿ ಅಧ್ಯಕ್ಷ ಪ್ರತಾಪ ಸಿಂಹ ನಾಯಕ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರೋಟರಿ ಸಂಸ್ಥೆ ಪ್ರತಿ ಕುಟುಂಬಕ್ಕೆ ರೂ 2000 ದಂತೆ ಸಹಾಯ ಧನ ನೀಡಲಿದ್ದು, ಉಳಿದ ಹಣವನ್ನು ಬ್ಯಾಂಕ್‌ಗಳು ಸಾಲವಾಗಿ ನೀಡಲಿದೆ. ನಮ್ಮ ಸಂಸ್ಥೆಯವರು ಸಹಾಯಧನದೊಂದಿಗೆ ಸೋಲಾರ್ ಅಳವಡಿಸಲಿದ್ದಾರೆ. ಯೋಜನೆಗಾಗಿ ನಿಡ್ಲೆ, ಕಳೆಂಜ ಮತ್ತು ಶಿಶಿಲ ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಸೋಲಾರ್ ವಿತರಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೆಲ್ಕೋ ಸಂಸ್ಥೆಯ ಅಧಿಕಾರಿಗಳು, ರೋಟರಿ ಕ್ಲಬ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.